## 42. ದಿಟ್ಟ ನಡೆಗೆ ಸವಾಲಿನ ಹಾದಿ

ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ನೇತೃತ್ವದ ಬಿಜೆಪಿ ಸರ್ಕಾರ ವರ್ಷ ಪೂರೈಸಿ 2ನೇ ವರ್ಷಕ್ಕೆ ಕಾಲಿಡುತ್ತಿದೆ. ಆದರೆ ಈ ಅವಧಿಯಲ್ಲಿ ಯಡಿಯೂರಪ್ಪ ಅವರು 'ಸಂತಸ–ಸಂಕಟ' ಎರಡನ್ನೂ ಅನುಭವಿಸಿದ್ದಾರೆ. ಎಲ್ಲಕ್ಕಿಂತ ಮುಖ್ಯವಾಗಿ ಎದುರಾದ ಸವಾಲುಗಳನ್ನು ದಿಟ್ಟತನದಿಂದಲೇ ಎದುರಿಸಿ ರಾಜ್ಯದಲ್ಲಿ ಸುಭದ್ರ ಹಾಗೂ ಅಭಿವೃದ್ಧಿಶೀಲ ಆಡಳಿತ ಕೊಡುವಲ್ಲಿ ಯಶಸ್ವಿಯಾಗಿದ್ದಾರೆ. ತಮ್ಮ ನಾಯಕತ್ವದ ಛಾಪು ಮತ್ತಷ್ಟು ಹೊಳೆಯುವಂತೆ ಕಾರ್ಯವೈಖರಿ ಮೂಲಕ ಸಾಬೀತುಪಡಿಸಿದ್ದಾರೆ.

ಕೊರೋನಾದಿಂದಾಗಿ ಆರ್ಥಿಕ ಬೆಳವಣಿಗೆಗೆ ದೊಡ್ಡ ಪೆಟ್ಟು ಬಿದ್ದಿರುವುದರಿಂದ ರಾಜ್ಯದ ಆರ್ಥಿಕ ಸಂಕಟವನ್ನು ಯಾವ ರೀತಿ ನಿಭಾಯಿಸಿಕೊಂಡು, ಅಭಿವೃದ್ಧಿ ಕೆಲಸಗಳಿಗೆ ಚಾಲನೆ ಕೊಡುತ್ತಾರೆ ಎಂಬುದು ಸಹ ಯಡಿಯೂರಪ್ಪ ನಾಯಕತ್ವವನ್ನು ಮತ್ತೊಮ್ಮೆ ಒರೆಗೆ ಹಚ್ಚಲಿದೆ.

ಹಿಂದಿನ ಜೆಡಿಎಸ್–ಕಾಂಗ್ರೆಸ್ ಸಮ್ಮಿಶ್ರ ಸರ್ಕಾರದ ಮಿತ್ರಪಕ್ಷಗಳ ನಾಯಕರ ನಡುವಿನ ಆಂತರಿಕ ಕಲಹದಿಂದ ದೋಸ್ತಿ ಸರ್ಕಾರ ಪತನಗೊಂಡ ಬಳಿಕ ಉದ್ಭವಿಸಿದ ರಾಜಕೀಯ ಸನ್ನಿವೇಶದ ಲಾಭ ಪಡೆದ ಬಿಜೆಪಿ, ಯಡಿಯೂರಪ್ಪ ನೇತೃತ್ವದಲ್ಲಿ ಸರ್ಕಾರ ರಚಿಸಿತು. ಆದರೆ ಸಿಎಂಗೆ ಆರಂಭದಿಂದಲೂ ಸಂತಸಗಳಿಗಿಂತ ಸಂಕಷ್ಟಗಳೇ ಹೆಚ್ಚು ಎದುರಾದವು. ಇವೆಲ್ಲಾ ಯಡಿಯೂರಪ್ಪ ನಾಯಕತ್ವವನ್ನು ಒರೆಗೆ ಹಚ್ಚಿದ್ದವು. ತಮ್ಮ ಸುದೀರ್ಘ ರಾಜಕೀಯ ಅನುಭವ, ಆಡಳಿತ ಹಾಗೂ ಪ್ರತಿಪಕ್ಷ ಎರಡೂ ಕಡೆಯೂ ಕೆಲಸ ಮಾಡಿದ ಅನುಭವಗಳ ಮೂಲಕ ಎಲ್ಲವನ್ನೂ ಚಾಣಾಕ್ಷತನದಿಂದ ನಿಭಾಯಿಸಿದರು. ಸಮ್ಮಿಶ್ರ ಸರ್ಕಾರದ ಅವಧಿಯಲ್ಲಿ ಹಳಿ ತಪ್ಪಿದ್ದ ಆಡಳಿತ ವ್ಯವಸ್ಥೆ ಸರಿದಾರಿಗೆ ತರುವುದು. ಜಡ್ಡುಗಟ್ಟಿದ್ದ ಆಡಳಿತ ಯಂತ್ರಕ್ಕೆ ಚುರುಕು ಮುಟ್ಟಿಸುವುದು. ರಾಜ್ಯದಲ್ಲಿ ಉಂಟಾಗಿದ್ದ ಅಭದ್ರ ಸರ್ಕಾರದ ವಾತಾವರಣ ಕೊನೆಗಾಣಿಸಿ ಅಭಿವೃದ್ಧಿಶೀಲ ಆಡಳಿತ ನೀಡುವುದು ಸಿಎಂಗೆ ಪ್ರಥಮ ಸವಲಾಗಿತ್ತು. ವರ್ಷದ ಆಡಳಿತ ಮೆಲುಕು ಹಾಕಿದಾಗ ಸಿಎಂ ಈ ನಿಟ್ಟಿನಲ್ಲಿ ಯಶಸ್ವಿಯಾಗಿರುವುದು ಗೋಚರಿಸುತ್ತಿದೆ. ಕಳೆದ ವರ್ಷದ ಪ್ರವಾಹ ನಿರ್ವಹಣೆ, ಈಗಿನ ಕೊರೋನಾ ಸೋಂಕು ವಿರುದ್ಧದ ಕಾರ್ಯಾಚರಣೆಗೆ ಕೈಗೊಂಡ ಕ್ರಮಗಳು, ಕಳೆದ ಡಿಸೆಂಬರ್‌ನಲ್ಲಿ ನಡೆದ ಉಪ ಚುನಾವಣೆಯ ಫಲಿತಾಂಶ ಅವಲೋಕಿಸಿದರೆ 'ಒನ್ ಮ್ಯಾನ್ ಆರ್ಮಿ'ಯಂತೆ ಯಡಿಯೂರಪ್ಪ ಅವರು ಆಡಳಿತ ನಿಭಾಯಿಸುತ್ತಿದ್ದಾರೆ.

**ಸಕಾಲಿಕ ಸ್ಪಂದನೆ:** ಕಳೆದ ವರ್ಷ ಅಧಿಕಾರ ವಹಿಸಿಕೊಂಡ ತಕ್ಷಣವೇ ಎದುರಾದ ಪ್ರವಾಹ ಪರಿಸ್ಥಿತಿ ಸಂದರ್ಭದಲ್ಲಿ ಸಂಪುಟ ರಚನೆ ಆಗಿರಲಿಲ್ಲ. ಮುಖ್ಯಮಂತ್ರಿಯಾಗಿ ಒಬ್ಬರಷ್ಟೇ ಅಧಿಕಾರ ಸ್ವೀಕರಿಸಿದ್ದರು. ಸಂಪುಟ ರಚನೆ ವಿಳಂಬವಾದರೂ ಮನೆಯಲ್ಲಿ ಕೂರಲಿಲ್ಲ. ಕಾಲಿಗೆ ಚಕ್ರ ಕಟ್ಟಿಕೊಂಡವರಂತೆ ಪ್ರವಾಹ ಪೀಡಿತ ಜಿಲ್ಲೆಗಳಿಗೆ ಭೇಟಿ ನೀಡಿ ಪರಿಹಾರ ಪುನರ್ವಸತಿ ಕಾರ್ಯಕ್ರಮಗಳನ್ನು ಖುದ್ದು ಪರಾಮರ್ಶೆ ನಡೆಸಿದರು. ಸಂತ್ರಸ್ತರಲ್ಲಿ ಧೈರ್ಯ, ವಿಶ್ವಾಸ ತುಂಬುವ ಕೆಲಸ ಮಾಡಿದರು. ಇದರಿಂದಾಗಿ ಜಿಲ್ಲಾಡಳಿತ ವ್ಯವಸ್ಥೆ ಸಕಾಲದಲ್ಲಿ ಸಂತ್ರಸ್ತರಿಗೆ ಸ್ಪಂದಿಸಲು ಸಾಧ್ಯವಾಯಿತು. ಅದೇ ರೀತಿ ಕಳೆದ 4 ತಿಂಗಳಿಂದ ಕೊರೋನಾ ನಿಯಂತ್ರಣದ ವಿಷಯದಲ್ಲಿ ನಿತ್ಯವೂ ಒಂದಲ್ಲ ಒಂದು ಸಭೆ, ಅಧಿಕಾರಿಗಳ ಜೊತೆ ನಿರಂತರ ಸಮಾಲೋಚನೆ, ಸಹೋದ್ಯೋಗಿಗಳಿಗೆ ಸಲಹೆ, ಸೂಚನೆ, ಎಚ್ಚರಿಕೆ ಕೊಡುವ ಮೂಲಕ ಇಡೀ ಆಡಳಿತ ವ್ಯವಸ್ಥೆಯನ್ನು ತಮ್ಮತ್ತ ಕೇಂದ್ರೀಕರಿಸಿಕೊಂಡು 'ಒನ್ ಮ್ಯಾನ್ ಆರ್ಮಿ' ರೀತಿ ಕೆಲಸ ನಿರ್ವಹಿಸುತ್ತಿರುವುದು ಪ್ರಧಾನಿ ನರೇಂದ್ರ ಮೋದಿ ಸೇರಿದಂತೆ ಬಿಜೆಪಿಯ ಹಿರಿಯರ ಮೆಚ್ಚುಗೆಗೂ ಪಾತ್ರರಾಗಿದ್ದಾರೆ.

**ವರ್ಷದಲ್ಲಿ ಮಾಡಿರುವ ಸಾಧನೆಗಳು**

- ಪ್ರವಾಹ ಪರಿಸ್ಥಿತಿ ನಿರ್ವಹಣೆಗೆ ರೂ.6108 ಕೋಟಿ ವೆಚ್ಚ ದಾಖಲೆ ಪ್ರಮಾಣದಲ್ಲಿ ಪರಿಹಾರ.
- ಪಿಎಂ ಕಿಸಾನ್ ಸಮ್ಮಾನ್ ಯೋಜನೆಯ ಫಲಾನುಭವಿಗಳಿಗೆ ಹೆಚ್ಚುವರಿ ರೂ. 4 ಸಾವಿರ ವಿತರಣೆ.
- ನೇಕಾರರು, ಮೀನುಗಾರರ ಬಹುಕಾಲದ ಸಾಲ ಮನ್ನಾ.
- ಎಪಿಎಂಸಿ ಕಾಯಿದೆಗೆ ತಿದ್ದುಪಡಿ ಮೂಲಕ 'ನನ್ನ ಬೆಳೆ ನನ್ನ ಹಕ್ಕು' ಸಿದ್ಧಾಂತ ಸಾಕಾರ.
- ಹೈದರಾಬಾದ್ ಕರ್ನಾಟಕಕ್ಕೆ ಕಲ್ಯಾಣ ಕರ್ನಾಟಕವೆಂದು ಮರು ನಾಮಕರಣ.

- ಕೃಷಿ, ಕೈಗಾರಿಕೆಗಳ ಅಭಿವೃದ್ಧಿಗೆ ಪೂರಕ ವಾತಾವರಣ ಸೃಷ್ಟಿ.
- ರೈತರು, ಉದ್ಯಮಿಗಳ ಅನುಕೂಲಕ್ಕೆ ಭೂ ಸುಧಾರಣೆ ಕಾಯಿದೆ ಸೆಕ್ಷನ್ 79ಎ, ಬಿ ಮತ್ತು ಸಿ ರದ್ದು.

**ಎದುರಿಸಿದ ಪ್ರಮುಖ ಸವಾಲುಗಳು**

- ಕಳೆದ ವರ್ಷ ಭಾರಿ ಮಳೆಯಿಂದ 25 ಜಿಲ್ಲೆಗಳ 119 ತಾಲ್ಲೂಕುಗಳಲ್ಲಿ ಉಂಟಾದ ಭೀಕರ ಪ್ರವಾಹ.
- ಪ್ರವಾಹ, ಕೊರೋನಾದಂತಹ ಸಂಕಷ್ಟಗಳ ನಡುವೆಯೂ ಆರ್ಥಿಕ ಸ್ಥಿರತೆ ಕಾಪಾಡುವುದು.
- ಸರ್ಕಾರದ ಅಳಿವು ಉಳಿವಿನ ಪ್ರಶ್ನೆಗೆ ಕಾರಣವಾಗಿದ್ದ 15 ಕ್ಷೇತ್ರಗಳ ಉಪ ಚುನಾವಣೆ.
- ಕೊರೋನಾ ತಡೆಗೆ ದಿಢೀರ್ ಘೋಷಿಸಿದ ಲಾಕ್‌ಡೌನ್‌ನಿಂದ ಎದುರಾದ ಬಿಕ್ಕಟ್ಟಿನ ನಿರ್ವಹಣೆ.
- ಅಭಿವೃದ್ಧಿ ಹಾಗೂ ನಾನಾ ಸಾಮಾಜಿಕ ಭದ್ರತಾ ಕೆಲಸಗಳನ್ನು ಮುಂದುವರಿಸುವ ಸವಾಲು.
- ತಮ್ಮ ನಾಯಕತ್ವದ ವಿರುದ್ಧ ಅಲ್ಲಲ್ಲಿ ಕೇಳಿ ಬರುತ್ತಿದ್ದ ಅಪಸ್ವರಗಳು.

ಆಧಾರ:ವಿಜಯಕರ್ನಾಟಕ, ದಿನಾಂಕ:26.07.2020